ಇ) ರೂ. 311.50 ಲಕ್ಷ ರೂ.ಗಳ ಅಂದಾಜು ಮೊತ್ತದ ಕಾಮಗಾರಿಗೆ ರೂ. 93.45 ಲಕ್ಷಗಳ ಅನುದಾನ ಒದಗಿಸಿದೆ.

717(1148) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡಲಕೊರೆತಕ್ಕೆ ಶಾಶ್ವತ ತಡೆಗೋಡೆ ರಚಿಸಲು ಸರ್ಕಾರ ನಿಗಧಿಪಡಿಸಿಕೊಂಡ ತಂತ್ರಾಂಶ ಯಾವುದು?

ಆ) ಈ ತಂತ್ರಾಂಶವನ್ನು ಸಾಕಾರಗೊಳಿಸಲು ಇರುವ ವಾಸ್ತವಿಕವಾದ ತೊಂದರೆ ಏನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಕೆ.ಇ.ಆರ್.ಎಸ್ ಹಾಗೂ C.W.P.R.S. Pune ಇವರು ಅಧ್ಯಯನ ಮಾಡಿ ನೀಡುತ್ತಿರುವ ವಿನ್ಯಾಸಗಳನ್ನು ಕಲ್ಲಿನಿಂದ ಶಾಶ್ವತ ತಡೆಗೋಡೆ ನಿರ್ಮಿಸಲು ಬಳಸಲಾಗುತ್ತಿದೆ.

ಆ) ಕಡಲ ಕೊರೆತ ತಡೆಗಟ್ಟಲು ಈ ತಂತ್ರಾಂಶ ಸಾಕಾರಗೊಳಿಸಲು ಯಾವುದೇ ತೊಂದರೆ ಇರುವುದಿಲ್ಲ. ಆದರೆ ಈ ಯೋಜನೆಗಳಿಗೆ ಅಗಾದ ಮೊತ್ತದ ಅನುದಾನ ಬೇಕಾಗಿರುವುದರಿಂದ ಅನುದಾನದ ಲಭ್ಯತೆಯ ಮೇರೆಗೆ ಕಾಮಗಾರಿಗಳನ್ನು ಪೂರ್ತಿಗೊಳಿಸಲಾಗುತ್ತಿದೆ.

718(1149) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಂಗಾರು ಪೂರ್ವದ ಅತಿಹೆಚ್ಚು ಮಳೆಯಿಂದ ಕಡಲು ಕೊರೆತ ಸಂಭವಿಸಿರುವುದಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ನೀಡಿದ ವರದಿಯಂತೆ ಎಷ್ಟು ಮೀಟರ್‌ಗಳಾಗಿರುತ್ತದೆ?

ಆ) ಹಾಗಿದ್ದಲ್ಲಿ, ತಡೆಗೋಡೆ ಕಾಮಗಾರಿಗೆ ಬಿಡುಗಡೆ ಮಾಡಲಾಗಿರುವ ಮತ್ತು ಬಿಡುಗಡೆ ಮಾಡಲಿರುವ ಅನುದಾನವೆಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಈ ವರ್ಷದ ಮಳೆಗಾಲದಲ್ಲಿ ರಾಜ್ಯದ ಕರಾವಳಿಯಲ್ಲಿ ತೀವ್ರ ತರವಾದ ಸಮುದ್ರ ಕೊರೆತ, ಉಂಟಾಗಿರುತ್ತದೆ. ದಿನಾಂಕ 28.5.2006 ರಿಂದ 26.6.2006ರ ವರೆಗೆ ಸಮುದ್ರ ಕೊರೆತ ಉಂಟಾಗಿದೆ ಪ್ರದೇಶದ ಜಿಲ್ಲಾವಾರು ವಿವರ ಈ ಕೆಳಗಿನಂತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1963 ಮೀ. ಉದ್ದಕ್ಕೆ. ಉಡುಪಿ ಜಿಲ್ಲೆಯಲ್ಲಿ 336 ಮೀ. ಉದ್ದಕ್ಕೆ ಉತ್ತರ ಕನ್ನಡ ಜಿಲ್ಲೆಯಲ್ಲಿ 1176 ಮೀ. ಉದ್ದಕ್ಕೆ.